# ವಯಸ್ಕರ ಸಬ್ಬತ್ತು ಶಾಲಾ
# ಅಧ್ಯಯನ ಮಾರ್ಗದರ್ಶಿ

# ಆರಂಭದ ಪುಸ್ತಕ

ಎರಡನೇ ತ್ರೈಮಾಸಿಕ

ಏಪ್ರಿಲ್, ಮೇ, ಜೂನ್ 2022


ಆಂಗ್ಲ ಮೂಲ :

**ಜಾಕ್ ಬಿ ದುಖನ್**

ಕನ್ನಡ ಭಾವಾನುವಾದ :

**ಚೆನ್ನಪ್ಪ ಸಾತ್ವಿಕ್**

**ಜೋಶುವ ಅಡ್ವೆಂಟಿಸ್ಟ್**



(ವಿ.ಸೂ : ಖಂಡಿತವಾಗಿಯೂ ಖಾಸಗಿ ಉಪಯೋಗಕ್ಕಾಗಿ ಮಾತ್ರ)

# ವಯಸ್ಕರ ಸಬ್ಬತ್ತು ಶಾಲಾ ಅಧ್ಯಯನ ಮಾರ್ಗದರ್ಶಿ

## ಎರಡನೇ ತ್ರೈಮಾಸಿಕ – ಏಪ್ರಿಲ್, ಮೇ, ಜೂನ್ 2022

## ಅನುಕ್ರಮಣಿಕೆ


| | | |
|---|---|---|
| 1. | ಸೃಷ್ಟಿ | ಮಾರ್ಚ್ 26–ಏಪ್ರಿಲ್ 1 |
| 2. | ಬೀಳುವಿಕೆ | ಏಪ್ರಿಲ್ 2–8 |
| 3. | ಕಾಯಿನನು ಮತ್ತು ಅವನ ಪರಂಪರೆ | ಏಪ್ರಿಲ್ 9–15 |
| 4. | ಜಲಪ್ರಳಯ | ಏಪ್ರಿಲ್ 16–22 |
| 5. | ಬಾಬೆಲ್ ಮತ್ತು ಎಲ್ಲಾದೇಶಗಳು | ಏಪ್ರಿಲ್ 23–29 |
| 6. | ಅಬ್ರಹಾಮನ ಮೂಲ | ಏಪ್ರಿಲ್ 30–ಮೇ 6 |
| 7. | ಅಬ್ರಹಾಮನ ಜೊತೆ ಒಡಂಬಡಿಕೆ | ಮೇ 7–13 |
| 8. | ವಾಗ್ದಾನ | ಮೇ 14–20 |
| 9. | ಮೋಸಗಾರ ಯಾಕೋಬ | ಮೇ 21–27 |
| 10. | ಯಾಕೋಬ– ಇಸ್ರಾಯೇಲ್ | ಮೇ 28–ಜೂನ್ 3 |
| 11. | ಕನಸುಗಳ ನಿಪುಣ ಯೋಸೆಫ್ | ಜೂನ್ 4–10 |
| 12. | ಐಗುಪ್ತದ ಪ್ರಭು–ಯೋಸೇಫ್ | ಜೂನ್ 11–17 |
| 13. | ಐಗುಪ್ತ ದೇಶದಲ್ಲಿ ಇಸ್ರಾಯೇಲನು | ಜೂನ್ 18–24 |



ಆಂಗ್ಲ ಮೂಲ : **ಜಾಕ್ ಬಿ ದುಖನ್**

ಕನ್ನಡ ಭಾವಾನುವಾದ : **ಚಿನ್ನಪ್ಪ ಸಾತ್ವಿಕ್, ಜೋಶುವ ಅಡ್ವೆಂಟಿಸ್ಟ್**


(ವಿ.ಸೂ : ಖಂಡಿತವಾಗಿಯೂ ಖಾಸಗಿ ಉಪಯೋಗಕ್ಕಾಗಿ ಮಾತ್ರ)

# ಸೃಷ್ಟಿ



**ಸಬ್ಬತ್ತಿನ ಮಧ್ಯಾಹ್ನ :** ಈ ಪಾಠದ ಅಧ್ಯಯನಕ್ಕಾಗಿ ಓದಿರಿ : ಕೀರ್ತ 10:1–3, ಆ.ಕಾಂಡ 1, ಆದಿಕಾಂಡ 2, ವಿ.ಕಾಂಡ 20:8–11, ವಿ.ಕಾಂಡ 40:33, ಮತ್ತಾಯ 25:14–30, ಮತ್ತಾಯ 17:7–9.

**ಸ್ಮರಣವಾಕ್ಯ : "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು"** (ಆದಿಕಾಂಡ 1:1).

ಆದಿಕಾಂಡ ಪುಸ್ತಕವು ಸೃಷ್ಟಿಯ ವಿಷಯದೊಂದಿಗೆ ಆರಂಭಗೊಳ್ಳುವುದರಿಂದ ಇಡೀ ಸತ್ಯವೇದವು ದೇವರ ಸೃಷ್ಟಿಕಾರ್ಯದಿಂದ ಆರಂಭಗೊಳ್ಳುತ್ತದೆ. ಇದು ಬಹಳ ಮುಖ್ಯವಾದ ಕಾರ್ಯವಾಗಿದೆ. ಯಾಕೆಂದರೆ ನಮ್ಮ ಸೃಷ್ಟಿಯು ಮಾನವನ ಮತ್ತು ಸತ್ಯವೇದದ ಚರಿತ್ರೆಯ ಆರಂಭವನ್ನು ಗುರುತಿಸುತ್ತದೆ. ಆದಿಕಾಂಡದ ಸೃಷ್ಟಿಯ ಕಥೆಯು ಸತ್ಯಸಂಗತಿಯಾಗಿದ್ದು ಸತ್ಯವೇದ ಚರಿತ್ರೆ ಮತ್ತು ಮಾನವನ ಇತರ ಘಟನೆಗಳಂತೆಯೇ ಚಾರಿತ್ರಿಕ ಸತ್ಯತೆ ಹೊಂದಿರುವುದನ್ನು ಸೂಚಿಸುತ್ತದೆ.

ಆದಿಕಾಂಡ ಒಂದನೇ ಮತ್ತು ಎರಡನೇ ಅಧ್ಯಾಯಗಳಲ್ಲಿರುವ ವಚನಗಳು ದೇವರು ಮತ್ತು ಮಾನವರನ್ನು ಕುರಿತು ಹೇಳುವ ಅಧ್ಯಾಯಗಳಾಗಿವೆ. ಈ ಪಾಠವನ್ನು ಕಲಿಯುವಾಗ ಏಳನೇ ದಿನದ ಬಗ್ಗೆ ಆಳವಾದ ಸತ್ಯವನ್ನು ಉತ್ತಮವಾದ ರೀತಿಯಲ್ಲಿ ಅರ್ಥಮಾಡಿಕೊಳ್ಳುತ್ತೇವೆ. ದೇವರು ಮಣ್ಣಿನಿಂದ ಮನುಷ್ಯನನ್ನು ತನ್ನ ಹೋಲಿಕೆಗೆ ಸರಿಯಾಗಿ ಸೃಷ್ಟಿಸಿವುದರ ಬಗ್ಗೆ ಧ್ಯಾನಿಸುತ್ತೇವೆ. ಜೀವವೃಕ್ಷದ ಜೊತೆಗೆ

---

* **ಈ ವಾರದ ಪಾಠವನ್ನು ಏಪ್ರಿಲ್ 2ರ ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಿರಿ.**

ಇದ್ದ ಒಳ್ಳೇದರ ಮತ್ತು ಕೆಟ್ಟದರ ಅರಿವನ್ನು ಉಂಟುಮಾಡುವ ವೃಕ್ಷದ ಉದ್ದೇಶವು ನಮ್ಮಲ್ಲಿ ಒಂದು ಕುತೂಹಲವನ್ನು ಹುಟ್ಟಿಸುತ್ತದೆ.

ಕೃಪೆಯು ಸತ್ಯವೇದದ ಸೃಷ್ಟಿಯ ಕಥೆಗಳಲ್ಲಿ ಬಹಳ ಮುಖ್ಯವಾದ ಪಾಠವಾಗಿದೆ. ನಮ್ಮ ಅಸ್ತಿತ್ವವು ಪೂರ್ಣವಾಗಿ ಕೃಪೆಯ ಕಾರ್ಯವಾಗಿದೆ. ದೇವರು ಭೂಮ್ಯಾಕಾಶಗಳನ್ನು ಉಂಟುಮಾಡಿದಾಗ ಮನುಷ್ಯನು ಇನ್ನೂ ಉಂಟಾಗಿರಲಿಲ್ಲ. ನಾವು ಸೃಷ್ಟಿಸಲ್ಪಟ್ಟದ್ದು ದೇವರ ವರವಾಗಿರುವಂತೆ ನಮ್ಮ ವಿಮೋಚನೆಯು ಸಹಾ ಆತನ ವರವಾಗಿದೆ. ನಮ್ಮ ಸೃಷ್ಟಿ ಮತ್ತು ನಮ್ಮ ವಿಮೋಚನೆ ಎರಡೂ ಪರಿಕಲ್ಪನೆಗಳು ಏಳನೇ ದಿನದ ಸಬ್ಬತ್ತಿನ ಆಜ್ಞೆಯಲ್ಲಿ ಅಸ್ತಿತ್ವದಲ್ಲಿರುವುದು ಎಂಥಾ ಗಹನವಾದ ವಿಷಯವಾಗಿದೆ!

**ಭಾನುವಾರ** **ಮಾರ್ಚ್ 27**

## ಸೃಷ್ಟಿ ಮಾಡುವ ದೇವರು

ಕೀರ್ತನೆ 100:1–3ನೇ ವಚನಗಳನ್ನು ಓದಿರಿ. ಸೃಷ್ಟಿ ಮಾಡಿದ ದೇವರ ಕುರಿತು ಮಾನವನ ಪ್ರತಿಕ್ರಿಯೆ ಏನಾಗಿದೆ ಮತ್ತು ಯಾಕೆ?

ಆದಿಕಾಂಡ ಒಂದನೇ ಅಧ್ಯಾಯವು ಸೃಷ್ಟಿಯ ವಿವರಣೆಯಾಗಿದ್ದು ಇದರ ಮೊದಲ ಸಂದೇಶವು ದೇವರೇ ಆಗಿದ್ದಾನೆ. ದೇವರು ಎಂಬ ಪದವು ಮೊದಲನೇ ವಚನದ ಮಧ್ಯಭಾಗದಲ್ಲಿದ್ದ ಆದಿಯಲ್ಲಿ ದೇವರು...... ಉಂಟುಮಾಡಿದನು ಎಂಬುದಾಗಿ ಓದುತ್ತೇವೆ. ಇಬ್ರಿಯ ಪದ್ಧತಿಯಂತೆ ದೇವರಿಗೆ ಪ್ರಾಮುಖ್ಯತೆ ನೀಡುವ ಸಲುವಾಗಿ ಆ ಪದಕ್ಕೆ ಅಡಿಗೆರೆಯನ್ನು ಎಳೆಯಲಾಗಿದೆ. ವಾಸ್ತವವಾಗಿ ಆದಿಕಾಂಡ ಪುಸ್ತಕವು ದೇವರನ್ನು ಎರಡು ವಿಭಿನ್ನ ರೀತಿಯಲ್ಲಿ ಮಂಡಿಸುವುದರಲ್ಲಿ ಆರಂಭವಾಗುತ್ತದೆ. ದೇವರು ಮಾನವನಿಂದ ಅಪರಿಮಿತವಾದ ದೂರದಲ್ಲಿದ್ದಾನೆಂದು ಸೃಷ್ಟಿಯ ಮೊದಲ ವಿವರಣೆಯು ಪ್ರಸ್ತುತಪಡಿಸುತ್ತದೆ. ಇದನ್ನು "ಎಲೋಹಿಮ್" ಎಂಬ ಹೆಸರು ದೇವರ ಪಾರಮ್ಯದ ಬಗ್ಗೆ ಹೇಳುತ್ತದೆ. ಎಲೋಹಿಮ್ ಎಂಬುದು ಉತ್ತಮೋತ್ತಮತೆಯನ್ನು ಮತ್ತು ಬಲವನ್ನು ವರ್ಣಿಸುವ ಹೆಸರಾಗಿದೆ. ಈ ಪದದ ಬಹುವಚನ ರೂಪವು ಗಾಂಭೀರ್ಯ ಮತ್ತು ನಮ್ಮ ಜ್ಞಾನಕ್ಕೆ ನಿಲುಕದ ಆಲೋಚನೆಯನ್ನು ವ್ಯಕ್ತಪಡಿಸುತ್ತದೆ. ಸೃಷ್ಟಿಯ ಎರಡನೆ ವಿವರಣೆಯು (ಆದಿಕಾಂಡ 2:4–25) ದೇವರನ್ನು ಹತ್ತಿರದವನೂ ವೈಯಕ್ತಿಕವಾದವನೂ ಆಗಿರುವಂತೆ

ಮಂಡಿಸುತ್ತದೆ. ಯೆಹೋವನನ್ನು ಸರ್ವವ್ಯಾಪಿ ದೇವರು ಇದು ನಿಕಟತೆ ಮತ್ತು ಸಂಬಂಧವನ್ನು ಹೇಳುವ ಹೆಸರು ಎಂಬುದಾಗಿ ಅನೇಕರು ನಂಬುತ್ತಾರೆ.

ಒಟ್ಟಾರೆಯಾಗಿ ಸೃಷ್ಟಿಯ ವಚನವು ದೇವರನ್ನು ಆರಾಧಿಸಬೇಕೆಂದು ನಮಗೆ ಮನವಿ ಮಾಡುತ್ತದೆ. ದೇವರ ಅನಂತವಾದ ಶಕ್ತಿಯ ಅರಿವಿನಿಂದ ಅದೇ ಸಮಯದಲ್ಲಿ ನಾವು ಆತನಲ್ಲಿ ಅವಲಂಬಿತರಾಗಿರುವುದನ್ನು ಮೊದಲನೆಯದಾಗಿ ಒಪ್ಪಿಕೊಳ್ಳುವವರಾಗಿರಬೇಕು (ಕೀರ್ತನೆ 100:3) ಆದುದರಿಂದ ಅನೇಕ ಕೀರ್ತನೆಗಳು ಸೃಷ್ಟಿಯ ಜೊತೆಗೆ ಆರಾಧನೆಯನ್ನು ಸಹಾ ಬೆಸೆಯುತ್ತವೆ (ಕೀರ್ತನೆ 95:1–, ಕೀರ್ತನೆ 139:13–14 ವಚನಗಳನ್ನು ಪ್ರಕಟನೆ 14:7ಕ್ಕೆ ಹೋಲಿಸಿರಿ. ದೇವರು ಗಂಭೀರನು, ಬಲಾಢ್ಯನು ಮತ್ತು ನಮ್ಮ ಜೊತೆ ನಿಕಟವಾಗಿ ಪ್ರೀತಿಯುಳ್ಳವನಾಗಿ ಸಂಬಂಧ ಹೊಂದಿರುವುದು ಆತನನ್ನು ಆರಾಧನೆಯಲ್ಲಿ ಹೇಗೆ ಸಮೀಪಿಸಬೇಕು ಎಂಬ ಮುಖ್ಯವಾದ ವಿಷಯವನ್ನು ತಿಳಿಸುತ್ತದೆ. ಆತನ ಆರಾಧನೆಯಲ್ಲಿ ಭಯವು, ಭಕ್ತಿಯು ಸಂತೋಷ ಮತ್ತು ಸಾನಿಧ್ಯದ ಆಶ್ವಾಸನೆಯು, ಕ್ಷಮಾಪಣೆ ಮತ್ತು ಪ್ರೀತಿಯು ಜೊತೆ ಜೊತೆಯಾಗಿ ಹೋಗುತ್ತವೆ. ಕೀರ್ತನೆ 2:11ನೇ ವಚನವನ್ನು ನೋಡಿರಿ. ದೇವರು ನಿರೂಪಿಸಿರುವ ಈ ಅನುಕ್ರಮವು ಸಹಾ ಅರ್ಥಪೂರ್ಣವಾಗಿಯೇ ಇದೆ. ದೇವರ ಸಾಮೀಪ್ಯ ಮತ್ತು ನಿಕಟತೆಯ ಅನುಭವದಂತೆ ಅಂತರದ ಅನುಭವವೂ ಸಹಾ ದೊರೆಯುತ್ತದೆ. ದೇವರು ಮಹೋನ್ನತನೆಂದು ಮನಗಂಡಾಗ ಮಾತ್ರ ಆತನ ಕೃಪೆ ಮತ್ತು ಆನಂದವನ್ನು ಭಯದಿಂದ ಮೆಚ್ಚಿಕೊಳ್ಳುತ್ತೇವೆ ಮತ್ತು ಆತನ ಅದ್ಭುತವಾದ ಪ್ರೀತಿಯ ಸಾನಿಧ್ಯವನ್ನು ನಮ್ಮ ಜೀವಿತದಲ್ಲಿ ಅನುಭವಿಸುತ್ತೇವೆ.

ದೇವರ ಅಗಾಧವಾತದ ಶಕ್ತಿಯ ಬಗ್ಗೆ ಆಲೋಚಿಸಿರಿ ಆತನು ಸರ್ವಸೃಷ್ಟಿಯನ್ನು ಎತ್ತಿಹಿಡಿದವನಾಗಿದ್ದರೂ ನಮ್ಮೊಬ್ಬಬ್ಬರಿಗೂ ಹತ್ತಿರದವನಾಗಿದ್ದಾನೆ. ಈ ಅದ್ಭುತವಾದ ಸತ್ಯವು ಬಹಳ ಆಶ್ಚರ್ಯಕರವಾಗಿದೆ ಏಕೆ?

**ಸೋಮವಾರ** **ಮಾರ್ಚ್ 29**

## ಸೃಷ್ಟಿ

**ಓದಿರಿ :** ಆದಿಕಾಂಡ 1:4, 10, 12, 18, 21, 25, 31 ಮತ್ತು ಆದಿಕಾಂಡ 2:1–3. ಒಳ್ಳೆಯದಾಗಿತ್ತು ಎಂಬ ನುಡಿಯ ಮಹತ್ವವೇನು? ಸೃಷ್ಟಿಕಾರ್ಯದ ಮುಕ್ತಾಯವು ಹೊಂದಿರುವ ಪಾಠವೇನು? (ಆ.ಕಾಂಡ 2:1–3).

ಸೃಷ್ಟಿಯ ಪ್ರತಿ ಹಂತದಲ್ಲೂ ದೇವರು ತಾನು ಮಾಡಿ ಕಾರ್ಯವನ್ನು ಅವಲೋಕಿಸಿ ಒಳ್ಳೇದೆಂದು ನೋಡುತ್ತಾನೆ. ಒಳ್ಳೇದೆಂದು ನೋಡಿದನು ಎಂಬ ವಿಶೇಷಣವು ಸೃಷ್ಟಿಯ ಕಾರ್ಯವು ಯಶಸಸ್ವಿಯಾಗಿ ಮುಕ್ತಾಯವಾಯಿತು ಮತ್ತು ಪ್ರಕೃತಿಯು ಕಾರ್ಯವೆಸಗಿತು ಎಂದು ಸಾಮಾನ್ಯವಾಗಿ ಅರ್ಥವಾಗುತ್ತದೆ. ಬೆಳಕು ಹೊಳೆಯಿತು (ಆ.ಕಾಂಡ 1:4) ಗಿಡಗಳು ಫಲವನ್ನು ಕೊಟ್ಟವು (ಆ.ಕಾಂಡ 1:12) ಇದು ಹೀಗೆಯೇ ಮುಂದುವರೆಯಿತು.

ಒಳ್ಳೇದೆಂದು ನೋಡಿದನು ಎಂಬ ಪದವು ಸೃಷ್ಟಿಯ ಕಾರ್ಯಕ್ಷಮತೆಗಿಂತ ಹೆಚ್ಚಿನದನ್ನು ಸೂಚಿಸುವಂಥದ್ದಾಗಿದೆ. ಸುಂದರವಾಗಿರುವ ಯಾವುದನ್ನಾದರೂ ಪ್ರಶಂಸೆ ಮಾಡಲು 'ಟೋನ್' ಎಂಬ ಇಬ್ರಿಯ ಪದವನ್ನು ಪರಿಶುದ್ಧ ಗ್ರಂಥದಲ್ಲಿ ಉಪಯೋಗಿಸಲಾಗಿದೆ (ಆ.ಕಾಂಡ 24:16). ಇದನ್ನು ಕೆಡುಕಿಗೆ ವಿರುದ್ಧಾರ್ಥಕವಾಗಿ (ಆ.ಕಾಂಡ 2:9) ಮತ್ತು ಮರಣಕ್ಕೆ ವಿರೋಧಭಾವದಲ್ಲಿ (ಆ.ಕಾಂಡ 2:17) ಉಪಯೋಗಿಸಲಾಗಿದೆ. "ಒಳ್ಳೆಯದು ಎಂದು ನೋಡಿದನು" ಎಂಬ ಪದವೃಂದವು ಸೃಷ್ಟಿಯು ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿತ್ತು, ಸೃಷ್ಟಿಯ ಸುಂದರವಾಗಿತ್ತು ಮತ್ತು ಪರಿಪೂರ್ಣವಾಗಿತ್ತು ಅದರಲ್ಲಿ ಯಾವುದೇ ಕೆಟ್ಟದ್ದಿರಲಿಲ್ಲವೆಂಬ ಅರ್ತವನ್ನು ಕೊಡುತ್ತದೆ. ಯೆಹೋವನು ಭೂಮ್ಯಾಕಾಶಗಳಾಗಿರಲಿಲ್ಲವೆಂಬುದನ್ನು ಸೃಷ್ಟಿಯ ಎರಡನೆ ವಿವರಣೆಯು ದೃಢಪಡಿಸುತ್ತದೆ (ಆ.ಕಾಂಡ 2:5).

ಸತ್ಯವೇದದ ಸೃಷ್ಟಿಯ ವಿವರವು ವಿಕಾಸವಾದವನ್ನು ಆಮೂಲಾಗ್ರವಾಗಿ ಅಲ್ಲಗಳೆಯುತ್ತದೆ, ವಿಕಾಸವಾದವು ಆಧಾರವಿಲ್ಲದ ಸಿದ್ಧಾಂತವಾಗಿದೆ.

ಕೀಳ್ತರದ ಪರಿಸ್ಥಿತಿಯಿಂದ ಆರಂಭಗೊಂಡು ಮೇಲ್ತರದ ಪರಿಸ್ಥಿತಿಗೆ ಮುಂದುವರೆಯುತ್ತಾ ಹೋಗುವುದನ್ನು ವಿಕಾಸವಾದವು ಸಮರ್ಥಿಸುತ್ತದೆ (ವಿಕಾಸವಾದವೆಂದರೆ ಅಮೀಬವೆಂಬ ಏಕಕೋಶ ಜೀವಿಯು ಲಕ್ಷಾಂತರ ವರ್ಷಗಳ ಕಾಲದಲ್ಲಿ ಬೆಳವಣಿಗೆಯಿಂದ ಮನುಷ್ಯವಾಯಿತು ಎಂಬ ಸಿದ್ಧಾಂತ). ಇದಕ್ಕೆ ಪ್ರತಿಯಾಗಿ ಸತ್ಯವೇದದ ಲೇಖಕನು ಸೃಷ್ಟಿಯು ಉದ್ದೇಶಪೂರ್ವಕವಾಗಿ ದೇವರಿಂದ ಉಂಟಾಯಿತೆಂದು ದೃಢಪಡಿಸುತ್ತಾನೆ (ಆ.ಕಾಂಡ 1:1). ಇವುಗಳಲ್ಲಿ ಆಕಸ್ಮಿಕವಾಗಿ ಅಸ್ತಿತ್ವಕ್ಕೆ ಬಂದಿರುವಂಥದ್ದು ಯಾವುದೂ ಇಲ್ಲ. ಈ ಲೋಕವು ತನ್ನಷ್ಟಕ್ಕೆ ತಾನೆ ಉಂಟಾಗಿರದೆ ಆತನ ಇಷ್ಟದ ಫಲಿತಾಂಶವಾಗಿ ಉಂಟಾಗಿದೆ (ಆ.ಕಾಂಡ 1:3).

'ಬಾರ' ಎಂಬ ಕ್ರಿಯಾಪದವು ಉಂಟುಮಾಡು ಎಂಬ ಅರ್ಥವನ್ನು ಕೊಡುತ್ತದೆ. ಇದನ್ನು ಆದಿಕಾಂಡ 1ನೇ ವಚನವು ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನೆಂದು ಅನುವಾದಿಸಲಾಗಿದೆ. ದೇವರು ಇದರ ಕರ್ತೃವಾಗಿ ಉಂಟಾಗಲಿ ಎಂದು ಬಾಯಿಂದ ನುಡಿಯಲಾಗಿ ತಕ್ಷಣ ಸೃಷ್ಟಿಯು ಘಟಿಸಿದೆ. ಆತನು ಉಂಟಾಗಲಿ ಎಂದು ನುಡಿದನು ಅದು ಹಾಗೆಯೇ ಆಯಿತು.

ಎಲ್ಲವೂ ಉಂಟಾದ ಮೇಲೆ (ಆ.ಕಾಂಡ 1:31) ಎಲ್ಲವನ್ನೂ ದೇವರು ಒಳ್ಳೆಯದಾಗಿದೆ ಎಂದು ಸ್ವತಃ ದೇವರೇ ಅಭಿಪ್ರಾಯಪಡುತ್ತಾನೆ (ಆದಿಕಾಂಡ 1:31). ಆದಿಕಾಂಡ 1:1ನೇ ವಚನವು ಭೂಮ್ಯಾಕಾಶಗಳು ಸೃಷ್ಟಿಯಾದ ಘಟನೆಯನ್ನು ಕುರಿತು ಹೇಳುತ್ತದೆ ಮತ್ತು ಆದಿಕಾಂಡ 2:1ನೇ ವಚನವು ಘಟನೆಯು ಮುಕ್ತಾಯವಾದುದನ್ನು ಹೇಳುತ್ತದೆ.

ಸಬ್ಬತ್ತನ್ನು ಸೇರಿಸಿ ಇದೆಲ್ಲವೂ 7 ದಿನಗಳಲ್ಲಿ ಪೂರ್ಣಗೊಂಡಿತೆಂದು ತಿಳಿಯುತ್ತೇವೆ. ಬಿಲಿಯನ್ ವರ್ಷಗಳಲ್ಲಿ ಜರುಗಿದ ಸೃಷ್ಟಿಯ ವಿಕಾಸವನ್ನು ಆದಿಕಾಂಡದಲ್ಲಿ ಹೇಳಿರುವ ಸೃಷ್ಟಿಯ ವಿವರಣೆಯು ಸಂಪೂರ್ಣವಾಗಿ ಅಲ್ಲ ಗಳೆಯುತ್ತದೆ ಏಕೆ? ಇವೆರಡು ವಿವರಣೆಗಳು ಒಂದಕ್ಕೊಂದು ಹೊಂದಿಕೆಯಾಗುವುದಿಲ್ಲ ಏಕೆ?

**ಮಂಗಳವಾರ** **ಮಾರ್ಚ್ 29**

## 'ಸಬ್ಬತ್ತು'

ಓದಿರಿ : ಆದಿಕಾಂಡ 2:3 ಮತ್ತು ವಿ.ಕಾಂಡ 20:8–11. ಏಳನೇ ದಿನದ ಸಬ್ಬತ್ತು ಸೃಷ್ಟಿಗೆ ಸಂಬಂಧಪಡುತ್ತದೆ ಯಾಕೆ? ನಾವು ಸಬ್ಬತ್ತನ್ನು ಹೇಗೆ ಕೈಗೊಳ್ಳುತ್ತೇವೆ ಎಂಬುದರ ಮೇಲೆ ಇದು ಪರಿಣಾಮ ಬೀರುತ್ತದೆ ಹೇಗೆ?

ದೇವರು ತನ್ನ ಸೃಷ್ಟಿಯ ಕಾರ್ಯವನ್ನು ನಿಖರವಾಗಿ ಮುಗಿಸಿದುದರ ಸಲುವಾಗಿ ಸಬ್ಬತ್ತನ್ನು ಸ್ಥಾಪಿಸಿದನು. ದೇವರು ತನ್ನ ಸೃಷ್ಟಿಯ ಕೆಲಸವನ್ನು ಮುಗಿಸಿದನು ನಂತರ ಅದನ್ನು ಒಳ್ಳೆಯದಾಗಿ ಕಂಡನು ಎಂಬುದಾಗಿ ನಾವು ನಂಬುತ್ತೇವೆ. ಆದುದರಿಂದ ಸಬ್ಬತ್ತು ನಮ್ಮಲ್ಲಿರುವ ನಂಬಿಕೆಯನ್ನು ವ್ಯಕ್ತಪಡಿಸುವಂಥದ್ದಾಗಿದೆ. ಸಬ್ಬತ್ತನ್ನು ಕೈಗೊಳ್ಳುವುದು ಎಂದರೆ ದೇವರೊಂದಿಗೆ ನಾವು ಸಹಾ ಸೇರಿಕೊಂಡು

ಆತನು ಮಾಡಿದ ಸೃಷ್ಟಿಯ ಮೌಲ್ಯ ಮತ್ತು ಸೌಂದರ್ಯವನ್ನು ಗುರುತಿಸುವುದು ಎಂದಾಗುತ್ತದೆ. ಹೇಗೆ ದೇವರು ತಾನು ಮಾಡಿದ ಕೆಲಸದಿಂದ ವಿಶ್ರಾಂತಿಹೊಂದಿದನೋ ಹಾಗೆಯೇ ನಮ್ಮ ಕೆಲಸಗಳಿಂದ ನಾವೂ ಸಹ ವಿಶ್ರಾಂತಿ ಹೊಂದಿಕೊಳ್ಳುತ್ತೇವೆ. ದೇವರು ಮಾಡಿದ ಸಬ್ಬತ್ತನ್ನು ಕೈಗೊಳ್ಳುವುದು ಎಂದರೆ ದೇವರು ಮಾಡಿದ ಈ ಭೌತಿಕ ಶರೀರವನ್ನು ಮತ್ತು ಈ ಸೃಷ್ಟಿಯ ಕೆಲಸವನ್ನು ಬಹಳ ಒಳ್ಳೆಯದೆಂದು ಒಪ್ಪಿಕೊಳ್ಳುವುದೇ ಆಗಿದೆ.

ಪುರಾತನ ಮತ್ತು ಆಧುನಿಕ ಮತಶ್ರದ್ಧೆಗಳು ಹೇಳುವಂತೆ ಮನುಷ್ಯ ಶರೀರವನ್ನು ಒಂದು ಕೆಡುಕು ಎಂಬುದಾಗಿ ಪರಿಶುದ್ಧ ಗ್ರಂಥದ ಹಳೆಯ ಅಥವಾ ಹೊಸ ಒಡಂಬಡಿಕೆಯು ಹೀನೈಸುವುದಿಲ್ಲ. ಹಾಗೆ ಹೇಳುವುದು ಅನ್ಯಮತದ ಪರಿಕಲ್ಪನೆಯಾಗಿದೆಯೇ ಹೊರತು ಸತ್ಯವೇದದ ಪರಿಕಲ್ಪನೆಯಲ್ಲ. ಇದಕ್ಕೆ ಬದಲಾಗಿ ಸಬ್ಬತ್ತನ್ನು ಕೈಗೊಳ್ಳುವವರು ಈ ಸೃಷ್ಟಿಯನ್ನು ಮಾಡಿದ ಮತ್ತು ತಮ್ಮ ಶರೀರಗಳನ್ನು ರೂಪಿಸಿದ ದೇವರಿಗೆ ಕೃತಜ್ಞತೆಯುಳ್ಳವರಾಗಿರುತ್ತಾರೆ. ಆದುದರಿಂದಲೇ ಅವರು ಆತನ ಸೃಷ್ಟಿಯಲ್ಲಿ ಸಂತೋಷಿಸುತ್ತಾರೆ ಮತ್ತು ಅದರ ಬಗ್ಗೆ ಕಾಳಜಿ ವಹಿಸುತ್ತಾರೆ.

ಸಬ್ಬತ್ತೆಂಬುದು ಮನುಷ್ಯ ಚರಿತ್ರೆಯಲ್ಲಿ ಮೊದಲಿಗೆ ಬರುವ (6 ದಿನಗಳು ಕಳೆದ ಬಳಿಕ) ಬರುವ ಅಂತ್ಯವಾಗಿರುತ್ತದೆ ಮತ್ತು ಕಷ್ಟದಲ್ಲಿ ಬಿದ್ದಿರುವ ಮಾನವ ಕುಲಕ್ಕೆ ಹಾಗು ನರಳಾಟದಲ್ಲಿರುವ ಲೋಕಕ್ಕೆ ನಿರೀಕ್ಷೆಯ ಗುರುತಾಗಿದೆ.

ದೇವದರ್ಶನ ಗುಡಾರದ ಕಟ್ಟೋಣವು ಮುಕ್ತಾಯಕ್ಕೆ ಬಂದಾಗ “ಕೆಲಸವನ್ನು ಮಾಡಿ ಮುಗಿಸಿದನು” ಎಂಬ ಪದವೃಂದವು ಮತ್ತೆ ಕಾಣಿಸಿಕೊಂಡಿರುವ ವಿಷಯ ಸ್ವಾರಸ್ಯಕರವಾಗಿದೆ (ವಿ.ಕಾಂಡ 40:33). ಹಾಗೆಯೇ ಸೊಲೊಮೋನನು ದೇವಾಲಯವನ್ನು ಕಟ್ಟಿ ಮುಗಿಸಿದಾಗಲೂ ಸಹಾ ಇದನ್ನು ನೋಡಬಹುದು. ಈ ಎರಡೂ ಸ್ಥಳಗಳು ಸುವಾರ್ತೆ ಮತ್ತು ರಕ್ಷಣೆ ಪಾಠಗಳನ್ನು ಬೋಧಿಸುತ್ತಿದ್ದವು. ಮನುಷ್ಯನು ಪಾಪದಲ್ಲಿ ಬಿದ್ದುಹೋದ ಮೇಲೆ ವಾರದ ಕಡೆಯಲ್ಲಿ ಬರುವ ಸಬ್ಬತ್ತು ರಕ್ಷಣೆಯೆಂಬ ಅದ್ಭುತದ ಕಡೆಗೆ ಬೆಟ್ಟು ಮಾಡಿ ತೋರಿಸುತ್ತದೆ. ಇದು ನೂತನ ಸೃಷ್ಟಿಯೆಂಬ ಅದ್ಭುತವು ಜರುಗುವ ಮುಖಾಂತರ ನಡೆಯುತ್ತದೆ (ಯೆಶಾಯ 65:17, ಪ್ರಕ 21:1). ಈ ಲೋಕದ ಕಷ್ಟಗಳು ಮತ್ತು ಶೋಧನೆಗಳು ಸಹಾ ಕೊನೆಗೊಳ್ಳುತ್ತವೆ ಎಂಬುದಕ್ಕೆ ವಾರದ ಕೊನೆಗೆ ಬರುವ ಸಬ್ಬತ್ತು ಒಂದು ಗುರುತಾಗಿದೆ.

ಆದುದರಿಂದಲೇ ಯೇಸುವು ಜನರ ರೋಗಗಳನ್ನು ಗುಣಪಡಿಸಲು ಸಬ್ಬತ್ತು ದಿನವನ್ನು ಪ್ರಶಸ್ತವಾದುದೆಂದು ಆರಿಸಿಕೊಳ್ಳುತ್ತಾನೆ (ಲೂಕ 13:13–16).

ಧಾರ್ಮಿಕ ನಾಯಕರು ಯಾವುದೇ ಸಂಪ್ರದಾಯಗಳಿಗೆ ಅಂಟಿಕೊಂಡಿದ್ದರೂ ಇದಕ್ಕೆ ಪ್ರತಿಯಾಗಿ ಸಬ್ಬತ್ತಿನ ದಿನದಲ್ಲಿ ಗುಣಪಡಿಸುವುದರ ಮೂಲಕ ಕಟ್ಟಕಡೆಯಲ್ಲಿ ರಕ್ಷಣೆಯ ಕೆಲಸವು ಮುಕ್ತಾಯವಾದಾಗ ಇರುವ ಪರಿಸ್ಥಿತಿಯು ಹೇಗಿರುತ್ತದೆ ಎಂಬುದನ್ನು ಯೇಸುವು ನಮಗೆ ಮತ್ತು ಜನರಿಗೆ ತೋರಿಸಿಕೊಡುತ್ತಾನೆ. ಆವಾಗ ಎಲ್ಲಾ ನೋವು ಸಂಕಟಗಳು ಕೊನೆಗೊಂಡಿರುತ್ತವೆ. ಹಾಗಾಗಿ ಪ್ರತಿ ಸಬ್ಬತ್ತು ನಮ್ಮನ್ನು ವಿಮೋಚನೆಯ ನಿರೀಕ್ಷೆಗೆ ನಡೆಸುತ್ತದೆ. ನೂತನ ಭೂಮ್ಯಾಕಾಶಗಳು ಉಂಟಾದಾಗ ನಾವು ಯೇಸುವಿನಲ್ಲಿ ಅನುಭವಿಸುವ ರಕ್ಷಣೆ ಮತ್ತು ವಿಶ್ರಾಂತಿಯನ್ನು ಈವಾಗ ಸಬ್ಬತ್ತಿನಲ್ಲಿ ವಿಶ್ರಾಂತಿ ಪಡೆದುಕೊಳ್ಳುವುದರ ಮೂಲಕ ಹೇಗೆ ಅನುಭವಿಸುತ್ತೇವೆ?

**ಬುಧವಾರ** **ಮಾರ್ಚ್ 30**

## ಮಾನವನ ಸೃಷ್ಟಿ

ದೇವರು ತನ್ನ ಸೃಷ್ಟಿಕಾರ್ಯದ ಕಟ್ಟಕಡೆಯ ಕೆಲಸವಾಗಿ ಮನುಷ್ಯನನ್ನು ಉಂಟುಮಾಡಿದನೆಂದು ಆದಿಕಾಂಡದ ಸೃಷ್ಟಿಯ ವಿವರಣೆಯು ತಿಳಿಸುತ್ತದೆ. ಈ ಭೂಲೋಕದಲ್ಲಿ ನಡೆದ ಇಡೀ ಸೃಷ್ಟಿಕಾರ್ಯದ ಸಮಾಪ್ತಿಯು ಮಾನವರ ಸೃಷ್ಟಿಯೊಂದಿಗೆ ಆಗುತ್ತದೆ.

ಸೆಲೆಮ್ (ಸ್ವರೂಪ) ಎಂಬ ಇಬ್ರಿಯ ಪದವು ಮನುಷ್ಯನ ಭೌತಶರೀರವನ್ನು ಕುರಿತು ಹೇಳುತ್ತದೆ ಮತ್ತು ಡಿಮೆಟ್ (ಹೋಲಿಕೆ) ಎಂಬ ಪದವು ಕಣ್ಣಿಗೆ ಕಾಣದಿರುವ ದೈವೀಕ ಗುಣಗಳನ್ನು ಕುರಿತು ಹೇಳುತ್ತದೆ.

ಆದುದರಿಂದ ದೇವರ ಸ್ವರೂಪ ಎಂಬ ಇಬ್ರಿಯ ಕಲ್ಪನೆಯು ಮನುಷ್ಯನ ಸ್ವಭಾವವನ್ನು ಬೈಬಲ್ಲಿನ ದೃಷ್ಟಿಗೆ ಅನುಗುಣವಾಗಿ ಅಖಂಡವಾದ ಅರ್ಥದಲ್ಲಿ ತಿಳಿದುಕೊಳ್ಳಬೇಕಾಗಿದೆ. ದೇವರು ಮನುಷ್ಯನನ್ನು ಶಾರೀರಿಕವಾಗಿ ಮತ್ತು ಆತ್ಮೀಕವಾಗಿ ತನ್ನ ಸ್ವರೂಪದಲ್ಲಿ ಗಂಡುಹೆಣ್ಣಾಗಿ ಉಂಟುಮಾಡಿದನೆಂದು ಸತ್ಯವೇದ ವಚನವು ದೃಢಪಡಿಸುತ್ತದೆ. ಎಲೆನ್ ಜಿ ವೈಟಮ್ಮನವರು ಸ್ಪಷ್ಟವಾಗಿ ಹೇಳುವಂತೆ ಆದಾಮನು ತನ್ನ ಸೃಷ್ಟಿಕರ್ತನ ಕರಗಳಿಂದ ರೂಪಿತನಾಗಿ ಬಂದಾಗ ಆತನು ತನ್ನ ಶರೀರದಲ್ಲಿ

ಮಾನಸಿಕ ಮತ್ತು ಆತ್ಮೀಕ ಸ್ವಭಾವದಲ್ಲಿ ದೇವರ ಸ್ವರೂಪವನ್ನು ಹೊತ್ತುಕೊಂಡಿದ್ದನು. ಶ್ರೀಮತಿ ವೈಟಮ್ಮನವರ Education ಪುಸ್ತಕದ ಪುಟ 15.

ದೇವಸ್ವರೂಪದ ಅಖಂಡತೆಯ (ಸಂಪೂರ್ಣತೆ) ಅರಿವು ಶರೀರವನ್ನು ಸಹಾ ಒಳಗೊಂಡಿದೆ, ಇದನ್ನು ಸೃಷ್ಟಿಯ ಇನ್ನೊಂದು ವಿವರಣೆಯು (2ನೇ ಅಧ್ಯಾಯ) ಮನುಷ್ಯನು ಬದುಕುವ ಪ್ರಾಣಿಯಾದನು ಎಂಬುದಾಗಿ ಮತ್ತೆ ದೃಢೀಕರಿಸುತ್ತದೆ (ಆದಿಕಾಂಡ 2:7ನೇ ವಚನ).

ದೇವರು ರೂಪಿಸಿದುದರ ಮತ್ತು ಶ್ವಾಸವನ್ನು ಊದಿದುದರ ಎರಡು ದೈವೀಕ ಕಾರ್ಯದ ಫಲಿತಾಂಶವಾಗಿ ಮನುಷ್ಯನು ಅಕ್ಷರಶಃ ಜೀವಾತ್ಮನಾದನು. ಶಾಸವು (ಉಸಿರು) ಬಹಳ ಸಲ ಆತ್ಮೀಕ ಆಯಾಮಕ್ಕೆ ಸಂಬಂಧಪಡುತ್ತದೆ. ನೆಲದ ಮಣ್ಣಿನಿಂದ ರೂಪಿಸುವುದರ ಫಲವಾಗಿ ಇದು ಉಸಿರಾಡುವ ಜೈವಿಕ ಶಕ್ತಿಗೂ ನಿಕಟವಾಗಿ ಸಂಬಂಧಪಡುತ್ತದೆ. ದೇವರು ಊದಿದ ಪ್ರಾಣವಾಯುವಿನಲ್ಲಿ ವಾಯುವು ಆತ್ಮೀಕವಾದುದು ಮತ್ತು ಪ್ರಾಣವು ಶಾರೀರಿಕವಾದುದಾಗಿದೆ.

ದೇವರು ನಂತರ ಮೂರನೇ ಕಾರ್ಯವನ್ನು ಮಾಡಿದನು. ದೇವರು ಈವಾಗ ಮನುಷ್ಯನ ದೇಹದಿಂದ ಹೆಣ್ಣನ್ನು ಸೃಷ್ಟಿಸಿದನು (ಆ.ಕಾಂಡ 2:21,22). ಸ್ತ್ರೀಯು ಪುರುಷನ ಸ್ವಭಾವವನ್ನೇ ಹೊಂದಿರುವುದನ್ನು ಒತ್ತಿ ಹೇಳುವ ವಿಧಾನದಲ್ಲಿ ದೇವರು ಈವಾಗ ಪುರುಷನ ದೇಹದಿಂದ ಸ್ತ್ರೀಯನ್ನು ಮಾಡಿದನು.

**ಗುರುವಾರ** **ಮಾರ್ಚ್ 31**

## ಮನುಷ್ಯನ ಕರ್ತವ್ಯ

ದೇವರು ಮೊದಲನೆಯ ಮನುಷ್ಯನನ್ನು ಉಂಟುಮಾಡಿದೊಡನೆಯೇ ಆತನಿಗೆ ಮೂರು ವರಗಳನ್ನು ಕೊಟ್ಟನು. ಒಂದನೆಯದು ಏದೇನ್ ತೋಟ (ಆ.ಕಾಂಡ 2:8) ಎರಡನೆಯದು ಆಹಾರ (ಆ.ಕಾಂಡ 2:16) ಮತ್ತು ಮೂರನೆಯದು ಸ್ತ್ರೀ (ಸಂಗಾತಿ) (ಆದಿಕಾಂಡ 2:22).

ಆದಿಕಾಂಡ 2:15–17 ವಚನಗಳನ್ನು ಓದಿರಿ. ಈ ಸೃಷ್ಟಿಯ ಕಡೆಗೆ ಮತ್ತು ದೇವರ ಕಡೆಗೆ ಮನುಷ್ಯನಿಗಿರುವ ಕರ್ತವ್ಯವೇನು? ಈ ಎರಡೂ ಕರ್ತವ್ಯಗಳು ಹೇಗೆ ಪರಸ್ಪರ ಸಂಬಂಧ ಹೊಂದಿವೆ?

ದೇವರು ಮನುಷ್ಯನನ್ನು ಎಲ್ಲಿ ಇರಿಸಿದ್ದನೋ ಆ ಪರಿಸರದ ವಿಷಯದಲ್ಲಿ ಕಾಳಜಿಯುಳ್ಳವನಾಗಿರುವುದು ಆತನ ಮೊದಲ ಕರ್ತವ್ಯವಾಗಿತ್ತು. ಅದರ ಲಾಲನೆ ಮತ್ತು ಪಾಲನೆ ಎರಡೂ ಅವನ ಕರ್ತವ್ಯವಾಗಿತ್ತು (ಆ.ಕಾಂಡ 2:15). ತೋಟವನ್ನು ವ್ಯವಸಾಯ ಮಾಡುವುದಕ್ಕೂ ಮತ್ತು ಅದನ್ನು ಕಾಯುವುದಕ್ಕೂ ದೇವರು ಮನುಷ್ಯನನ್ನು ಇಟ್ಟನು. 'ಆವಾದ್' ಒಂದು ಕ್ರಿಯಾಸೂಚಕ ಪದ ಮನುಷ್ಯನು ಮಾಡಬೇಕಾದ ಕೆಲಸವನ್ನು (ವ್ಯವಸಾಯವನ್ನು) ಸೂಚಿಸುತ್ತದೆ ಮತ್ತು 'ಶಾಮರ್' ಒಂದು ಕ್ರಿಯಾಪದ ತನಗೆ ಕೊಡಲ್ಪಟ್ಟದ್ದನ್ನು ಸಂರಕ್ಷಿಸುವುದನ್ನು ಕುರಿತು ಹೇಳುತ್ತದೆ?

ನಾವು ಉಡುಗೊರೆಯನ್ನು ಸ್ವೀಕರಿಸಿದರೆ ಸಾಲದು, ಅದಕ್ಕಾಗಿ ನಾವು ಕೆಲಸ ಮಾಡಬೇಕು ಮತ್ತು ಅದರ ಪ್ರಯೋಜನವನ್ನು ಪಡೆದುಕೊಳ್ಳಬೇಕು ಎಂಬ ಪಾಠವನ್ನು ಕ್ರಿಸ್ತನು ತಲಾಂತುಗಳ ಸಾಮ್ಯದ ರೂಪದಲ್ಲಿ ಕಲಿಸುತ್ತಾನೆ (ಮತ್ತಾಯ 25:14–30).

ಎರಡನೇ ಕರ್ತವ್ಯವು ಆಹಾರಕ್ಕೆ ಸಂಬಂಧಪಟ್ಟಿದೆ. ದೇವರು ಮನುಷ್ಯನಿಗಾಗಿ ಕೊಟ್ಟದ್ದನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ಆ.ಕಾಂಡ 1:27ನ್ನು ನೋಡಿರಿ). ದೇವರು ಮನುಷ್ಯನಿಗೆ ನೀನು ಯಥೇಚ್ಛವಾಗಿ ತಿನ್ನಬಹುದು (ಆ.ಕಾಂಡ 2:16) ಎಂದು ಹೇಳಿದನು. ಮನುಷ್ಯನು ಮರವನ್ನಾಗಲೀ ಅದರ ಫಲವನ್ನಾಗಲೀ ಸೃಷ್ಟಿ ಮಾಡಲಿಲ್ಲ. ಅವುಗಳು ದೇವರು ಕೊಟ್ಟ ಕೃಪೆಯ ವರಗಳಾಗಿದ್ದವು.

ಆದರೆ ಇಲ್ಲಿ ಆತನಿಗೆ ಒಂದು ಕಟ್ಟಳೆಯನ್ನು ವಿಧಿಸಲಾಗಿತ್ತು. ಅವರು (ಆದಾಮ, ಹವ್ವಳು) ದೇವರು ಕೊಟ್ಟ ದಾನವನ್ನು ಉಚಿತವಾಗಿ ಅನುಭವಿಸಬೇಕಾಗಿತ್ತು. ಅವರು ಮರದ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದಾಗಿತ್ತು. ಕೃಪೆಯ ಭಾಗವಾಗಿಯೇ ದೇವರು ಅದರೊಂದಿಗೆ ಒಂದು ನಿರ್ಬಂಧವನ್ನು ಸಹಾ ಹಾಕಿದ್ದನು. ಅವರು ಒಂದು ನಿರ್ದಿಷ್ಟಮರದ ಹಣ್ಣನ್ನು ಮಾತ್ರ ತಿನ್ನಬಾರದಾಗಿತ್ತು. ಯಾವುದೇ ನಿರ್ಬಂಧವಿಲ್ಲದೇ ಅನುಭವಿಸುವುದು ಮರಣಕ್ಕೆ ನಡೆಸುತ್ತದೆ. ಏದೇನ್ ತೋಟದಲ್ಲಿದ್ದ ಈ ನಿಯಮವು ಸರಿಯಾಗಿತ್ತು ಮತ್ತು ಅನೇಕ ರೀತಿಯಲ್ಲಿ ಈ ನಿಯಮವು ಇಂದಿಗೂ ಸಹ ಅಸ್ತಿತ್ವದಲ್ಲಿದೆ.

ಮನುಷ್ಯನಿಗೆ ಇರುವ ಮೂರನೇ ಕರ್ತವ್ಯ ಮೂರನೇ ಬಹುಮಾನವಾದ ಹೆಂಗಸಿಗೆ (ಸ್ತ್ರೀಗೆ) ಸಂಬಂಧಿಸಿದೆ. ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು

ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು (ಆ.ಕಾಂಡ 2:24). ದಾಂಪತ್ಯದ ಒಡಂಬಡಿಕೆ ಮತ್ತು ಗಂಡ ಹೆಂಡತಿ ಒಂದೇ ಶರೀರವಾಗುವ ಉದ್ದೇಶ ಇವುಗಳ ಬಗ್ಗೆ ಮನುಷ್ಯನಿಗಿರುವ ಜವಾಬ್ದಾರಿಯನ್ನು ಎತ್ತಿ ತೋರಿಸಲು ಈ ಅಸಾಧಾರಣ ವಚನವು ಬಲಯುತವಾಗಿ ವ್ಯಕ್ತಪಡಿಸುತ್ತದೆ (ಮತ್ತಾಯ 19:7–9ನೇ ವಚನಗಳಿಗೆ ಹೋಲಿಸಿರಿ).

ಪುರುಷನು ತನ್ನ ತಂದೆತಾಯಿಗಳನ್ನು ಬಿಡಬೇಕು ಎಂದು ಹೇಳುವುದು ಸತ್ಯವೇದದ ಪುರುಷ ಪ್ರಧಾನಶೈಲಿಯ ಕಾರಣದಿಂದ ಆದುದರಿಂದ ಇದು ಸ್ತ್ರೀಗೂ ಅನ್ವಯವಾಗುತ್ತದೆ. ಎರಡು ರೀತಿಯಲ್ಲಿ ಮದುವೆಯು ದೇವರಿಂದ ಬರುವ ಉಡುಗೊರೆಯಾಗಿದ್ದು ಒಮ್ಮೆ ಈ ಉಡುಗೊರೆಯನ್ನು ಸ್ವೀಕರಿಸಿದರೆ ಮನುಷ್ಯರ (ಗಂಡ ಹೆಂಡತಿ ಈರ್ವರ) ಹೊಣೆಗಾರಿಕೆಯನ್ನು (ಜವಾಬ್ದಾರಿ) ಈಡು ಮಾಡುತ್ತದೆ, ಇದು ಪುರುಷ ಮತ್ತು ಸ್ತ್ರೀ ಇಬ್ಬರ ಮೇಲೂ ಬರುವ ಜವಾಬ್ದಾರಿಯಾಗಿದ್ದು ಇದನ್ನು ಪೂರೈಸಲು ಪರಸ್ಪರ ನಂಬಿಗಸ್ತರಾಗಿರಬೇಕು.

ನಿಮಗೆ ದೇವರಿಂದ ಎಲ್ಲವೂ ಕೊಡಲ್ಪಟ್ಟಿದೆಯೆಂದು ಆಲೋಚಿಸಿರಿ. ನಿಮಗೆ ಕೊಡಲ್ಪಟ್ಟಿರುವುಗಳ ಮೇಲೆ ನಿಮ್ಮ ಜವಾಬ್ದಾರಿಗಳೇನು?

**ಶುಕ್ರವಾರ** **ಏಪ್ರಿಲ್ 1**

**ಹೆಚ್ಚಿನ ಚಿಂತನೆ :** ಶ್ರೀಮತಿ ಎಲೆನ್ ಜಿ ವೈಟಮ್ಮನವರ 'ಎಜುಕೇಷನ್' ಎಂಬ ಪುಸ್ತಕದಲ್ಲಿ ಸೈನ್ಸ್ ಅಂಡ್ ದಿ ಬೈಬಲ್ ಎಂಬ ಅಧ್ಯಾಯದ ಪುಟ 128, 129ನ್ನು ಓದಿರಿ ಮತ್ತು ದಿ ಸ್ಟೋರಿ ಆಫ್ ರಿಡೆಂಪ್ಷನ್' ಪುಸ್ತಕದಲ್ಲಿ 'ದಿ ಕ್ರಿಯೇಷನ್' ಎಂಬ ಅಧ್ಯಾಯ ಪುಟ 21ನ್ನು ಓದಿರಿ.

ಪ್ರಕೃತಿಯೆಂಬ ಪುಸ್ತಕವು ಮತ್ತು ಅದು ತೋರುವ ಪ್ರಕಟನೆಗಳು ಒಬ್ಬನೇ ಸರ್ವಾಲೋಚಕನ ಛಾಪನ್ನೇ ಹೊಂದಿರುವುದರಿಂದ ಎರಡೂ ಮಾಧ್ಯಮಗಳೂ ಒಂದೇ ವಿಧವಾಗಿ ಮಾತಾಡುತ್ತವೆ. ವಿಧವಿಧವಾಗಿ, ಬೇರೆ ಬೇರೆ ಭಾಷೆಗಳಲ್ಲೂ ಅವುಗಳು ಒಂದೇ ಸತ್ಯಕ್ಕೆ ಸಾಕ್ಷಿಗಳಾಗಿವೆ.

ಮನುಷ್ಯರ ಜ್ಞಾನವು ಪರಿಶೋಧನೆಗಳಿಂದ ಹೊಸಹೊಸ ಆವಿಷ್ಕಾರಗಳನ್ನು ಮಾಡುತ್ತಲೇ ಹೋಗುತ್ತದೆ. ಆದರೆ ಅವನು ಅವುಗಳನ್ನು ಸರಿಯಾಗಿ

ಅರ್ಥಮಾಡಿಕೊಳ್ಳಲಾರನು. ಅವು ದೇವರಿಂದ ಪ್ರಕಟವಾದವುಗಳಿಗೆ ವಿರೋಧವಾಗಿವೆ. ಪ್ರಕೃತಿಯೆಂಬ ಪುಸ್ತಕ ಮತ್ತು ಕೈಗಳಿಂದ ಬರೆದ ವಚನಗಳು ಒಂದಕ್ಕೊಂದು ಬೆಳಕನ್ನು ಚೆಲ್ಲುತ್ತವೆ (ಸಮರ್ಥಿಸುತ್ತವೆ) ಪರಿಶುದ್ಧ ಬರಹಗಳು ಮತ್ತು ಪ್ರಕೃತಿಯು ದೇವರು ಕಾರ್ಯಮಾಡುವ ನಿಯಮಗಳನ್ನು ಬೋಧಿಸುತ್ತಿರಲಾಗಿ ಅವು ನಮಗೆ ದೇವರನ್ನು ತಿಳಿಯಪಡಿಸುತ್ತವೆ. ನಾವು ಪ್ರಕೃತಿಯಲ್ಲಿರುವ ಸಂಗತಿಗಳನ್ನು ಗಮನಿಸುವಾಗ (ಪರಿವೀಕ್ಷಿಸುವಾಗ) ನಾವು ವಿಜ್ಞಾನದಿಂದ ತೆಗೆದುಕೊಂಡ ದೋಷಯುಕ್ತ ತೀರ್ಮಾನಗಳು ವಿಜ್ಞಾನಕ್ಕೂ ದೈವಪ್ರಕಟನೆಗೂ ಅನುಮಾನದ ಮನಸ್ತಾಪವನ್ನು ಉಂಟುಮಾಡುತ್ತದೆ.

ಇವುಗಳ ಮಧ್ಯೆ ಸಾಮರಸ್ಯವನ್ನು ಪ್ರಾಯತ್ನಪೂರ್ವಕವಾಗಿ ತರುವ ಉದ್ದೇಶದಿಂದ ಸತ್ಯವೇದದ ವಚನಗಳ ಅರ್ಥಗಾರಿಕೆಯನ್ನು ವಿಜ್ಞಾನದ ಕಲ್ಪನೆಗಳಿಗೆ ಅಳವಡಿಸಿಕೊಂಡಾಗ ಅದು ದೇವರ ವಾಕ್ಯಗಳ ಬಲವನ್ನು ಕುಸಿಯುವಂತೆ ಮಾಡಿ ನಾಶಪಡಿಸುತ್ತದೆ.

ಮೋಶೆಯು ಬರೆದಿರುವ ಸೃಷ್ಟಿಯ ದಾಖಲೆಯ ಸಾಹಿತ್ಯದ ವ್ಯಾಖ್ಯಾನವನ್ನು ವಿರೋಧಿಸುವಂತೆ ಭೂಗರ್ಭ ಶಾಸ್ತ್ರವನ್ನು ಬೋಧಿಸಲಾಗುತ್ತಿದೆ. ಭೂಮಿಯ ಹಿಂದಿನ ಅಸ್ತವ್ಯಸ್ತ ಸ್ಥಿತಿಯು ಇಂದಿನ ಇಂತಹ ವ್ಯವಸ್ಥಿತ ಸ್ಥಿತಿಗೆ ವಿಕಾಸ ಹೊಂದಲು ಮಿಲಯಗಟ್ಟಲೆ ವರ್ಷಗಳು ಬೇಕಾದವು ಎಂಬುದಾಗಿ ಭೂಗರ್ಭ ಶಾಸ್ತ್ರವು ಸಾಧಿಸಿ ಹೇಳುತ್ತದೆ. ಈ ಕಲ್ಪಿತ ವೈಜ್ಞಾನಿಕ ಸಿದ್ಧಾಂತವನ್ನು ಸತ್ಯವೇದದ ಸೃಷ್ಟಿಯ ವಿವರಣೆಗೆ ಸರಿಹೊಂದಿಸುವ ಪ್ರಯತ್ನ ಮಾಡಿದಾಗ ದೇವರು ಮಾಡಿದ ಆರು ದಿನಗಳ ಸೃಷ್ಟಿಕಾರ್ಯವನ್ನು ಅನಿರ್ದಿಷ್ಟಾವಧಿಗೆ ಅಂದರೆ ಸಾವಿರಾರು ಅಥವಾ ಮಿಲಿಯನ್ ವರ್ಷಗಳೇ ಹಿಡಿದಿರಬಹುದು ಎಂದು ಊಹೆ ಮಾಡಬೇಕಾಗುತ್ತದೆ.

ಅಂತಹ ಒಂದು ತೀರ್ಮಾನ ಸಂಪೂರ್ಣವಾಗಿ ತಪ್ಪಾದುದಾಗಿದೆ. ಸತ್ಯವೇದದ ದಾಖಲೆಯು ಎಲ್ಲಾ ವಚನಗಳಿಗೂ ಮತ್ತು ಪ್ರಕೃತಿಯ ಬೋಧನೆಗೂ ಸರಿ ಹೊಂದುತ್ತದೆ"– ಶ್ರೀಮತಿ ವೈಟಮ್ಮನವರ ಎಜುಕೇಷನ್ ಪುಸ್ತಕದಲ್ಲಿ ಪುಟ 128 ಮತ್ತು 129.

## ಚರ್ಚಿಸಬೇಕಾದ ಪ್ರಶ್ನೆಗಳು

1. ಆದಿಯಲ್ಲಿ ನಡೆದ ಘಟನೆಗಳನ್ನು ಕಟ್ಟು ಕಥೆಗಳೆಂದು ಅವುಗಳಿಗೆ ಯಾವುದೇ ಚಾರಿತ್ರಿಕ ವಾಸ್ತವತೆ ಇಲ್ಲವೆಂದು ನಂಬಿಕೊಳ್ಳುವುದರಿಂದ ನಮ್ಮ ವಿಶ್ವಾಸದ ಜೀವಿತದ ಮೇಲೆ ಪರಿಣಾಮ ಬೀರುತ್ತದೆ ಯಾಕೆ? ಆದಿಕಾಂಡದಲ್ಲಿರುವ ಇತರೆ ಕಥೆಗಳಂತೆ ಸೃಷ್ಟಿಯ ಕಥೆಯ ವಿವರಣೆಯೂ ಸಹಾ ಚಾರಿತ್ರಿಕವಾದುದೆಂದು ಅದರ ಬರಹಗಾರನಿಗೆ ತಿಳಿದಿತ್ತು ಎಂಬುದನ್ನು ಸೂಚಿಸುವ ಯಾವ ಸುಳುಹುಗಳು ವಚನದಲ್ಲಿವೆ? ಈ ಕಥೆಗಳ ಚಾರಿತ್ರಿಕ ಸತ್ಯತೆಯ ಬಗ್ಗೆ ಯೇಸುಕ್ರಿಸ್ತನು ನೀಡುವ ಸಾಕ್ಷಿ ಏನು?

2. ಭೂಮಿಯ ಮೇಲಿನ ಪಾರುಪತ್ಯಗಾರಿಕೆಯ ಪ್ರಾಮುಖ್ಯತೆಯ ಬಗ್ಗೆ ಆದಿಕಾಂಡದ ಕಥೆಯು ನಮಗೆ ಏನನ್ನು ಬೋಧಿಸುತ್ತದೆ? ಸೃಷ್ಟಿಕರ್ತನನ್ನು ಬಿಟ್ಟು ಸೃಷ್ಟಿಯನ್ನೇ ಪೂಜಿಸಲು ಇಚ್ಛಿಸುವ ಶೋಧನೆಯನ್ನು ತಪ್ಪಿಸಿಕೊಂಡು ನಮ್ಮ ಭೂಗ್ರಹದ ಬಗ್ಗೆ ಉತ್ತಮ ಪಾರುಪತ್ಯಗಾರರಾಗಿರಬಹುದು ಹೇಗೆ? (ರೋಮ 1:25ನ್ನು ನೋಡಿರಿ).

3. ಸಾವಿರಾರು ವರ್ಷಗಳಿಂದಲೂ ಪಾಪವು ತಂದಿರುವ ನಾಶನವನ್ನು ಹೊರತುಪಡಿಸಿ ಆವಾಗ ಬಹಳ ಒಳ್ಳೇದೆಂದು ಕಂಡಿದ್ದ ಈ ಸೃಷ್ಟಿಯು ಮೂಲದಲ್ಲಿ ತನಗಿದ್ದ ಅದ್ಭುತ, ಸೌಂದರ್ಯ ಮತ್ತು ಗಂಭೀರತೆಯನ್ನು ಇಂದಿಗೂ ಪ್ರಕಟಿಸುತ್ತಾ ದೇವರ ಒಳ್ಳೇತನದ ಮತ್ತು ಶಕ್ತಿಯ ಬಗ್ಗೆ ಬಲಯುತವಾಗಿ ಮಾತಾಡುತ್ತಿದೆ ಹೇಗೆ?